**ದಿನಾಂಕಃ 08.06.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ ಃ –**

7. ದಿಃ14.07.2017 ರಂದು ಸಂಜೆ 6–30 ಗಂಟೆಗೆ ನಾವು ಎಸಿಬಿ ಠಾಣೆಯನ್ನು ಬಿಟ್ಟು ತಾಲ್ಲೂಕ್ ಕಛೇರಿ, ನಜರ್‌ಬಾದ್ ಕಡೆಗೆ ಇಲಾಖಾ ವಾಹನದಲ್ಲಿ ಹೋದೆವು. ವಾಹನವನ್ನು ತಾಲ್ಲೂಕು ಕಛೇರಿ ಮುಂಭಾಗದಲ್ಲಿ ಇರಿಸಿದ್ದೆವು. ಆಗ ತನಿಖಾಧಿಕಾರಿಯವರು ನನ್ನನ್ನು ಮತ್ತು ದೂರುದಾರರನ್ನು ತಾಲ್ಲೂಕು ಕಛೇರಿಯ ನೆಲಮಹಡಿಯಲ್ಲಿ ಇದ್ದಂತಹ ಭೂಮಿ ಕೇಂದ್ರಕ್ಕೆ ಕಳುಹಿಸಿದ್ದರು. ಆ ರೂಂ ನಂ.8 ಆಗಿತ್ತು. ಆಗ ಕಳುಹಿಸುವಾಗ ಪಿರ್ಯಾದುದಾರರಿಗೆ ವಾಯ್ಸ್ ರೆಕಾರ್ಡರನ್ನು ಕೊಟ್ಟು ಕಳುಹಿಸಿದ್ದರು. ಪಿರ್ಯಾದುದಾರರು ಆ ರೂಂ.8 ರ ಒಳಕ್ಕೆ ಹೋದರು. ನಾನು ಹೊರಗಡೆ ನಿಂತಿದ್ದೆ. ಪಿರ್ಯಾದುದಾರರು 10 ನಿಮಿಷಗಳ ನಂತರ ಆ ರೂಮಿನಿಂದ ಹೊರಕ್ಕೆ ಬಂದು ತಮ್ಮ ಕೈನಿಂದ ತಲೆ ಸವರಿ ಕೊಂಡರು. ಆಗ ಡಿವೈಎಸ್‌ಪಿ ಹಾಗೂ ಅವರ ಸಿಬ್ಬಂದಿ ಮತ್ತು ಇನ್ನೊಬ್ಬ ಪಂಚಸಾಕ್ಷಿ ಬಂದರು. ಆಗ ಪಿರ್ಯಾದಿದಾರರು ಡಿವೈಎಸ್‌ಪಿಯವರ ಬಳಿ ನಾನು ಆತನಿಗೆ ಹಣ ಕೊಟ್ಟಿದ್ದೇನೆ ಎಂದು ತೋರಿಸಿ ಹೇಳಿದರು. ಪಿರ್ಯಾದಿದಾರರು, ತಾನು ಬಲಗೈನಿಂದ ಹಣವನ್ನು ಕೊಟ್ಟಿದ್ದು, ಆತ ತನ್ನ ಎಡಗೈನಿಂದ ಪಡೆದು ತನ್ನ ಪ್ಯಾಂಟಿನ ಎಡ ಜೇಬಿಗೆ ಇಟ್ಟುಕೊಂಡರು ಎಂದು ಹೇಳಿದರು. ಆಗ ಡಿವೈಎಸ್‌ಪಿಯವರು ಆತನ ಬಳಿ ಹೋಗಿ ತಮ್ಮ ಗುರುತಿನ ಚೀಟಿಯನ್ನು ತೋರಿಸಿ ನಾವು ಎಸಿಬಿಯವರು ಎಂದು ಪರಿಚಯಿಸಿಕೊಂಡರು. ಸ್ಥಳದಲ್ಲಿಯೇ 4 ಬೌಲ್‌ಗಳಲ್ಲಿ ಸೋಡಿಯಂ ದ್ರಾವಣವನ್ನು ತಯಾರಿಸಿಕೊಂಡರು. ಅದಕ್ಕೆ ಫಿನಾಪ್ತಲೀನ್ ಪೌಡರನ್ನು ಹಾಕಿದರು. ಈಗ ತೋರಿಸಿದ ಮು.ಮಾ.6 ರ ಮೇಲೆ ನನ್ನ ಸಹಿ ಇರುತ್ತದೆ. ಅದು ಮಾದರಿ ದ್ರಾವಣವಾಗಿರುತ್ತದೆ. ನಂತರ ತನಿಖಾಧಿಕಾರಿ ಆರೋಪಿಯ ಬಲಗೈಯನ್ನು ಆ ದ್ರಾವಣದಲ್ಲಿ ಅದ್ದಿಸಿ ತೆಗೆದರು. ಆಗ ಆ ದ್ರಾವಣದಲ್ಲಿ ಯಾವುದೇ ಬದಲಾವಣೆಯಾಗಲಿಲ್ಲ. ಈಗ ತೋರಿಸಿದ ಮು.ಮಾ.7 ರ ಮೇಲೆ ನನ್ನ ಸಹಿ ಇರುತ್ತದೆ. ಅದು ಆರೋಪಿಯ ಬಲಗೈಯನ್ನು ಅದ್ದಿಸಿ ತೆಗೆದ ದ್ರಾವಣವಾಗಿರುತ್ತದೆ. ನಂತರ ತನಿಖಾಧಿಕಾರಿ ಆರೋಪಿಯ ಎಡಗೈಯನ್ನು ಆ ದ್ರಾವಣದಲ್ಲಿ ಅದ್ದಿಸಿ ತೆಗೆದಾಗ ಆ ದ್ರಾವಣ ತಿಳಿಗುಲಾಬಿ ಬಣ್ಣಕ್ಕೆ ತಿರುಗಿತು. ಈಗ ತೋರಿಸಿದ ಮು.ಮಾ.8 ರ ಮೇಲೆ ನನ್ನ ಸಹಿ ಇರುತ್ತದೆ. ಅದು ಆರೋಪಿಯ ಎಡಗೈಯನ್ನು ಅದ್ದಿಸಿ ತೆಗೆದ, ತಿಳಿಗುಲಾಬಿ ಬಣ್ಣದ ದ್ರಾವಣವಾಗಿರುತ್ತದೆ. ನಂತರ ಆರೋಪಿ ತನ್ನ ಎಡಜೇಬಿನಲ್ಲಿ ಇದ್ದ ಹಣವನ್ನು ತೆಗೆದು ಹಾಜರು ಪಡಿಸಿದ. ಅದನ್ನು 1 ನೇ ಪಂಚಸಾಕ್ಷಿಗೆ ಕೊಟ್ಟರು. ನಾನು ಮತ್ತು 1 ನೇ

ಪಂಚಸಾಕ್ಷಿ ಆ ಹಣವನ್ನು ಎಣಿಸಿ ಈಗಾಗಲೇ ನಿಪಿ-18 ರಂತೆ ದಾಖಲು ಮಾಡಿಕೊಂಡಿರುವ ನೋಟಿನ ಸಂಖ್ಯೆಗಳೊಂದಿಗೆ ತಾಳೆ ಮಾಡಿದಾಗ, ಅವುಗಳು ಒಂದೇ ಆಗಿದ್ದವು. ರೂ.500/-ರ 32 ನೋಟುಗಳು ಹಾಗೂ ರೂ.2000/-ರ 7 ನೋಟುಗಳು ಇದ್ದವು. ನಂತರ ಆ ಹಣವನ್ನು ಕವರು ಮಾಡಿ ತೆಗೆದುಕೊಂಡರು.

8. ಆರೋಪಿಗೆ ಬದಲಿ ಪ್ಯಾಂಟಿನ ವ್ಯವಸ್ಥೆ ಮಾಡಿ ಆತನು ತೊಟ್ಟಿದ್ದ ಪ್ಯಾಂಟನ್ನು ತೆಗೆದುಕೊಂಡು ಆ ಪ್ಯಾಂಟಿನ ಎಡ ಜೇಬನ್ನು ಸೋಡಿಯಂ ಕಾರ್ಬೋನೇಟ್ ಧ್ರಾವಣದಲ್ಲಿ ಅದ್ದಿಸಿ ತೊಳೆದರು. ಈಗ ತೋರಿಸಿದ ಮು.ಮಾ.11ರ ಮೇಲೆ ನನ್ನ ಸಹಿ ಇರುತದೆ. ಅದು ಆರೋಪಿಯ ಪ್ಯಾಂಟಿನ ಎಡ ಜೇಬನ್ನು ಸೋಡಿಯಂ ಕಾರ್ಬೋನೇಟ್ ಧ್ರಾವಣದಲ್ಲಿ ಅದ್ದಿಸಿ ತೊಳೆದಾಗ ಆದಂತಹ ತಿಳಿಗುಲಾಬಿ ಬಣ್ಣದ ಧ್ರಾವಣವಾಗಿರುತ್ತದೆ. ಈಗ ತೋರಿಸಿದ ಪ್ಯಾಂಟನ್ನು ನೋಡಿ ಗುರುತಿಸುತ್ತೇನೆ. ಅದು ಆ ದಿನ ಆರೋಪಿ ತೊಟ್ಟಿದ್ದ ಪ್ಯಾಂಟ್ ಆಗಿರುತ್ತದೆ. ಅದನ್ನು ಈಗಾಗಲೇ ಮು.ಮಾ.12 ಎಂದು ಗುರುತು ಪಡಿಸಿಕೊಳ್ಳಲಾಗಿದೆ.

9. ನಂತರ ಪಿರ್ಯಾದುದಾರನು ತನ್ನಲ್ಲಿದ್ದ ವಾಯ್ಸ್ ರೆಕಾರ್ಡರನ್ನು ತನಿಖಾಧಿಕಾರಿಗೆ ನೀಡಿದರು. ಅವರು ಅದನ್ನು ಆನ್ ಮಾಡಿ ಸಂಭಾಷಣೆಯನ್ನು ಕೇಳಿಸಿದರು. ಆಗ ಅಲ್ಲಿ ಹಾಜರಿದ್ದ ತಹಸೀಲ್ದಾರ್ ಸುರೇಶ್ ಬಾಬುರವರು, ಆ ಸಂಭಾಷಣೆಯಲ್ಲಿ ಇದ್ದಂತಹ ಒಂದು ಧ್ವನಿ ಆರೋಪಿಯ ಧ್ವನಿ ಎಂದು ಗುರುತಿಸಿದರು. ಮತ್ತು ಆ ವಾಯ್ಸ್ ರೆಕಾರ್ಡರನ್ನು ಲ್ಯಾಪ್ ಟಾಪ್ಗೆ ಅಳವಡಿಸಿ ಸಿಡಿಗೆ ವರ್ಗಾಯಿಸಿಕೊಂಡರು ಮತ್ತು ಆ ಸಂಭಾಷಣೆಯನ್ನು ಬೆರಳಚ್ಚು ಮಾಡಿಕೊಂಡರು.

10. ಆರೋಪಿಯು ಆ ಸ್ಥಳದಲ್ಲಿ ಕಾನ್ವೆಂಟಿಗೆ ಸಂಬಂಧಪಟ್ಟ ಒಟ್ಟು 32 ದಾಖಲಾತಿಗಳನ್ನು ಹಾಜರು ಪಡಿಸಿದರು. ಅವುಗಳನ್ನು ತಹಸೀಲ್ದಾರರು ಧೃಡೀಪಡಿಸಿದರು. ಆರೋಪಿಗೆ ತನ್ನ ಸಮಾಜಾಯಿಷಿಯನ್ನು ನೀಡಲು ಕೇಳಿದರು. ಆಗ ಆತ, ತಾನು ಕಛೇರಿಯಲ್ಲಿ ಇರಲಿಲ್ಲ, ಹೆಂಡತಿಗೆ ಹುಷಾರಿಲ್ಲದೇ ಇದ್ದುದರಿಂದ ನೋಡಲು ಹೋಗಿದ್ದೆ, ಆಗ ಪಿರ್ಯಾದುದಾರರು ನನ್ನ ಸ್ನೇಹಿತರೊಂದಿಗೆ ನೋಡಲು ಬಂದಿದ್ದರು ಎಂದು ಬರೆದು ಕೊಟ್ಟರು.

11. ಮೇಲೆ ಹೇಳಿದ ಎಲ್ಲಾ ಪ್ರಕ್ರಿಯೆಯನ್ನು ಮಹಜರಿನಲ್ಲಿ ಬರೆಯಲಾಯಿತು. ಆ ಮಹಜರಿಗೆ ನನ್ನ ಸಹಿಯನ್ನು ಪಡೆದಿರುತ್ತಾರೆ. ಈಗ ತೋರಿಸಿದ ದಾಖಲಾತಿಯ ಮೇಲೆ ನನ್ನ ಸಹಿ ಇರುತ್ತದೆ. ಅದು ಟ್ರಾಪ್ ಮಹಜರಾಗಿದ್ದು, ಅದನ್ನು ಈಗಾಗಲೇ ನಿಪಿ-15 ಎಂದು ಗುರುತು ಪಡಿಸಿಕೊಳ್ಳಲಾಗಿದ್ದು, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ-15(ಸಿ) ಎಂದು ಗುರುತು ಪಡಿಸಲಾಯಿತು. ಎಸಿಬಿ ಪೊಲೀಸರು ನನ್ನ ಎರಡು ಹೇಳಿಕೆಗಳನ್ನು ಪಡೆದುಕೊಂಡಿರುತ್ತಾರೆ.

12. ಮರುದಿನ PWD ಇಂಜಿನೀಯರ್ ಗೀರಿಶ್ ರವರನ್ನು ನಾನು ಸ್ಥಳಕ್ಕೆ ಕರೆದುಕೊಂಡು ಹೋದೆ. ಅಲ್ಲಿ ಅವರು ಸ್ಥಳದ ನಕಾಶೆಯನ್ನು ತಯಾರಿಸಿದರು.

13. ಈಗ ತೋರಿಸಿದ ಒಟ್ಟು ರೂ.500/-ರ 32 ನೋಟುಗಳು ಹಾಗೂ ರೂ.2000/-ರ 7 ನೋಟುಗಳು ಹಾಗೂ ಅವುಗಳ ಮೇಲಿನ ಸಂಖ್ಯೆಗಳು ನಿಪಿ-18 ರಲ್ಲಿ ನಮೂದಿಸಿರುವ ಸಂಖ್ಯೆಗಳೊಂದಿಗೆ ತಾಳೆಯಾಗಿರುತ್ತವೆ. ಅವುಗಳನ್ನು ನಾನೀಗ ನೋಡುತ್ತಿದ್ದೇನೆ. ಅವುಗಳನ್ನು ಈಗಾಗಲೇ ಮು.ಮಾ.9 ಎಂದು ಗುರುತು ಪಡಿಸಿಕೊಳ್ಳಲಾಯಿತು.

**ಮುಂದುವರೆದ ಮುಖ್ಯವಿಚಾರಣೆಗಾಗಿ ಸಮಯ ಕೋರಲಾಯಿತು.**
(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.